**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ: 31/2024**

**ಚಾ.ಸಾಃ 6, ಫ್ರಾ.ಸಾಃ 2**

| | |
|---|---|
| ಸಾಕ್ಷಿದಾರನ ಹೆಸರು | ಶರತ್ ದುರ್ಗೇಕರ್ |
| ತಂದೆಯ ಹೆಸರು | ಉಮೇಶ ದುರ್ಗೇಕರ್ |
| ವಯಸ್ಸು | 22 ವರ್ಷಗಳು |
| ಉದ್ಯೋಗ | ಬೋಟ್ ಚಾಲಕ |
| ವಾಸ್ತವ್ಯ | ಧಾರೇಶ್ವರ, ಕುಮಟಾ ತಾಲೂಕು |

**ಸಾಕ್ಷಿಯನ್ನು ದಿನಾಂಕಃ 24-04-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿರುತ್ತೇನೆ.

ದಿನಾಂಕ 13-11-2023 ರಂದು ಸಂಜೆ 06-15 ರ ವೇಳೆಗೆ ಧಾರೇಶ್ವರದಿಂದ ಮಂಕಿಯಲ್ಲಿರುವ ಮಾವನಮನೆಗೆ ಹೋಗಲು ನಾನು ಮತ್ತು ನನ್ನ ಸ್ನೇಹಿತ ಮೃತ ವಿನಾಯಕ ಬೈಕಿನಲ್ಲಿ ಹೋಗುತ್ತಿದ್ದೆವು. ಬೈಕನ್ನು ವಿನಾಯಕ ಓಡಿಸುತ್ತಿದ್ದು ಬೈಕಿನ ಹಿಂಭಾಗದಲ್ಲಿ ನಾನು ಕುಳಿತಿದ್ದೆ. ಸುಮಾರು ಸಂಜೆ 06-45 ರ ಸಮಯದಲ್ಲಿ ನಾವು ಕರ್ಕಿ ರೈಲ್ವೇ ಸ್ಟೇಶನ್ ಹತ್ತಿರ ಹೋಗುತ್ತಿದ್ದಾಗ ಹೊನ್ನಾವರ ಕಡೆಯಿಂದ ಕುಮಟಾ ಕಡೆಗೆ ಒಂದು ಕಾರು ಬರುತ್ತಿದ್ದು ಸದರಿ ಕಾರು ವೇಗವಾಗಿ ಬರುತ್ತಿತ್ತು. ಕಾರಿನ ಚಾಲಕ ಕಾರಿಗೆ ಯಾವುದೇ ಇಂಡಿಕೇಟರನ್ನು ಹಾಕದೇ ರೈಲ್ವೆಸ್ಟೇಶನ್ ಕಡೆಗೆ ಹೋಗಲು ಏಕಾ ಏಕಿ ಬಲಕ್ಕೆ ತಿರುಗಿಸಿ ನಾವು ಹೋಗುತ್ತಿದ್ದ ಬೈಕಿಗೆ ಡಿಕ್ಕಿಪಡಿಸಿದರು. ಅಪಘಾತ ಆದ ನಂತರ ನಾನು ರಸ್ತೆಯ ಮೇಲೆ ಬಿದ್ದಿದ್ದು ತಲೆಗೆ ಪೆಟ್ಟಾಗಿತ್ತು, ವಿನಾಯಕನಿಗೂ ತಲೆಗೆ ಪೆಟ್ಟಾಗಿತ್ತು. ಸದರಿ ಕಾರನ್ನು ನ್ಯಾಯಾಲಯದ ಮುಂದಿರುವ ಆರೋಪಿ ಚಲಾಯಿಸುತ್ತಿದ್ದು ಕಾರಿನಲ್ಲಿ ಆತನ ಕುಟುಂಬದವರು ಇದ್ದು, ಕಾರಿನಲ್ಲಿದ್ದ ಆತನ 2 ಮಕ್ಕಳಿಗೂ ಸಹ ಪೆಟ್ಟಾಗಿರುತ್ತದೆ. ತದನಂತರದಲ್ಲಿ ನನಗೆ ಪ್ರಜ್ಞೆ ಹೋಯಿತು. ಹೊನ್ನಾವರ ಆಸ್ಪತ್ರೆಗೆ ಕರೆದುಕೊಂಡು ಬಂದ ನಂತರ ನನಗೆ ಪ್ರಜ್ಞೆ ಬಂದಿರುತ್ತದೆ. ನನ್ನನ್ನು ಕಾರವಾರ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ವಿನಾಯಕರವರನ್ನು ಉಡುಪಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ವಿನಾಯಕ 3 ದಿನಗಳ ನಂತರ ಮೃತಪಟ್ಟಿರುತ್ತಾರೆ. ಅಪಘಾತಪಡಿಸಿದ ಕಾರಿನ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯು ಕಾರನ್ನು ವೇಗವಾಗಿ ಚಲಾಯಿಸಿಕೊಂಡು ಬಂದು ಇಂಡಿಕೇಟರ್ ಹಾಕದೇ ಏಕಾಏಕಿ ಬಲಕ್ಕೆ ತಿರುಗಿಸಿದ್ದರಿಂದ ಆರೋಪಿ ತಪ್ಪಿನಿಂದ ಅಪಘಾತವಾಗಿರುತ್ತದೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ. ಆರ್. ನಾಯ್ಕರಿಂದಃ</u>**

ಚಾಸಾ-1 ರವರು ಬೈಕಿನಲ್ಲಿ ನಮ್ಮ ಹಿಂದೆ ಬರುತ್ತಿದ್ದರು. ಅಪಘಾತದ ಪೂರ್ವದಲ್ಲಿ ಸುಮಾರು 50 ಅಡಿ ದೂರದಿಂದ ನಾವು ರಸ್ತೆಯ ಎಡಬದಿಯಲ್ಲಿ ಬರುತ್ತಿದ್ದೆವು. ಎದುರಿನಲ್ಲಿ ಬರುವ ವಾಹನಗಳು ಕಾಣುತ್ತಿದ್ದವು ಎಂದರೆ ಸರಿ. ಅಪಘಾತ ಪೂರ್ವದಲ್ಲಿ ಕಾರು ಬರುತ್ತಿದ್ದುದನ್ನು ನಾನು ನೋಡಲಿಲ್ಲ. ಅಪಘಾತ ಆದ ಸ್ಥಳದಲ್ಲಿ ರಸ್ತೆ ಸುಮಾರು 30 ಅಡಿ ಅಗಲ ಇದೆ. ಅಪಘಾತ ಆದ ಸ್ಥಳವು ರಸ್ತೆಯ ಮಧ್ಯದ ಡಿವೈಡರ್ ಗ್ಯಾಪ್ ನಿಂದ 5 ಅಡಿ ಅಂತರದಲ್ಲಿ ಆಗಿರುತ್ತದೆ. ಅಪಘಾತ ಪೂರ್ವದಲ್ಲಿ ಕಾರು ಏಕಾ ಏಕಿ ಬಲಕ್ಕೆ ತಿರುಗಿದ್ದರಿಂದ ಎಡಭಾಗದಲ್ಲಿ ಹೋಗುತ್ತಿದ್ದ ವಿನಾಯಕ ಗಾಬರಿಯಿಂದ ಬ್ರೇಕ್ ಹಾಕಿ ಬಲಭಾಗದ ಲೈನಗೆ ತೆಗೆದುಕೊಂಡರು. ಆದರೂ ಕಾರು ಡಿಕ್ಕಿಪಡಿಸಿತು. ಕಾರು ವೇಗವಾಗಿ ಬಂದು ಬಲಕ್ಕೆ ತೆಗೆದುಕೊಂಡಿದ್ದರಿಂದ ಹಿಂಭಾಗದ ಎಡಭಾಗದ ಡೋರ್ ಬೈಕಿಗೆ ಡಿಕ್ಕಿಪಡಿಸಿರುತ್ತದೆ. ಹೊನ್ನಾವರ ಕಡೆಯಿಂದ ಬಂದ ಕಾರು ಬಲಾಭಿಮುಖವಾಗಿ ತಿರುಗಿಸಿ ನಮಗೆ ಅಡ್ಡ ಬಂದು ಬೈಕಿಗೆ ಡಿಕ್ಕಿಪಡಿಸಿರುತ್ತದೆ. ಅಪಘಾತ ಆದ ನಂತರ ನಾನು ಡಿವೈಡರ್ ಮಧ್ಯದಲ್ಲಿ ಬಿದ್ದಿರುತ್ತೇನೆ. ವಿನಾಯಕ ಬೈಕ್ ಬಿದ್ದ ಸ್ಥಳದಲ್ಲಿ ಬಿದ್ದಿರುತ್ತಾನೆ. ಅಪಘಾತ ಸ್ಥಳದಿಂದ ಸುಮಾರು 5 ಅಡಿ ದೂರದಲ್ಲಿ ನಾನು ಬಿದ್ದಿರುತ್ತೇನೆ. ಅಂದರೆ ವಿನಾಯಕನ ಪಕ್ಕದಲ್ಲಿ 5 ಅಡಿ ದೂರದಲ್ಲಿ ಬಿದ್ದಿರುತ್ತೇನೆ. ಅಪಘಾತ ಪೂರ್ವದಲ್ಲಿ ನಾವು ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದು ಕಾರು ಏಕಾ ಏಕಿ ಬಲಕ್ಕೆ ಬಂದಿದ್ದರಿಂದ ವಿನಾಯಕರವರೂ ಸಹ ಬೈಕನ್ನು ಸುಮಾರು 18 ಅಡಿ ದೂರ ಬಲಭಾಗಕ್ಕೆ ತೆಗೆದುಕೊಂಡಿರುತ್ತಾರೆ. ಆದರೂ ಕಾರು ಡಿಕ್ಕಿಪಡಿಸಿರುತ್ತದೆ. ಕಾರಿನ ಡೋರನ ಭಾಗವು ಬೈಕಿಗೆ ಡಿಕ್ಕಿಪಡಿಸಿರುತ್ತದೆ. ಬೈಕ್ ಡಿಕ್ಕಿ ಪಡಿಸಿಲ್ಲ. ಆರೋಪಿಯು ಹೊನ್ನಾವರ ಕಡೆಯಿಂದ ಬಂದು ರೈಲ್ವೆಸ್ಟೇಶನಗೆ ಹೋಗಲು ಡಿವೈಡರ್ ಕಾರನ್ನು ಬಲಕ್ಕೆ ತಿರುಗಿಸಿ ರೈಲ್ವೆಸ್ಟೇಶನ ಕಡೆಗೆ ಹೋಗಲು ಕಾರನ್ನು ನಿಲ್ಲಿಸಿಕೊಂಡು ನಿಂತಿದ್ದಾಗ ವೇಗವಾಗಿ ವಿನಾಯಕರವರು ಬೈಕನ್ನು ಚಲಾಯಿಸಿಕೊಂಡು ಬಂದು ಬೇರೆ ವಾಹನವನ್ನು ಓವರಟೇಕ್ ಮಾಡಲು ಪ್ರಯತ್ನಿಸಿ ನಿಂತಿದ್ದ ಕಾರಿಗೆ ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಬೈಕ್ ಸವಾರನ ತಪ್ಪಿನಿಂದ ಅಪಘಾತವಾಗಿದ್ದು ಗೊತ್ತಿದ್ದರೂ ಸಹ ಆತನ ಕುಟುಂಬದವರಿಗೆ ಸಹಾಯವಾಗಲಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**